2017 ಕ.ತೀ.ವ. 1000

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

## ನಜೀರ್ ಅಹಮ್ಮದ್ –ವಿರುದ್ಧ– ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಜಿಲ್ಲೆ*

ಕರ್ನಾಟಕ ಉಚ್ಚ ನ್ಯಾಯಾಲಯಗಳ ಕಾಯಿದೆ ಕಲಂ 4 ರಡಿಯಲ್ಲಿ ರಿಟ್ ಮೇಲ್ಮನವಿ

ರಿಟ್ ಮೇಲ್ಮನವಿದಾರರು ಎದುರುದಾರರಲ್ಲಿ ಶಿರಸ್ತೇದಾರರಾಗಿ ಕೆಲಸ ನಿರ್ವಹಿಸುತ್ತಿದ್ದು, ಅವರು ಸ್ವ–ಇಚ್ಛಾ ನಿವೃತ್ತಿಯನ್ನು ಬಯಸಿ ನೀಡಿದ ಪತ್ರವನ್ನು ಎದುರುದಾರರು ತಿರಸ್ಕರಿಸುತ್ತಾರೆ. ಎದುರುದಾರರ ಕ್ರಮವನ್ನು ರಿಟ್ ಅರ್ಜಿದಾರರು ಏಕಸದಸ್ಯ ಪೀಠದಲ್ಲಿ ಪ್ರಶ್ನಿಸಲಾಗಿ, ರಿಟ್ ಅರ್ಜಿಯು ವಜಾಗೊಳಿಸಲ್ಪಡುತ್ತದೆ. ಏಕಸದಸ್ಯ ಪೀಠದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಮೇಲ್ಮನವಿ.

ವೈದ್ಯಕೀಯ ಮಂಡಳಿಯಿಂದ ಮೇಲ್ಮನವಿದಾರರು ಖಾಯಿಲೆಗೆ ಸಂಬಂಧಿಸಿದಂತೆ ವೈದ್ಯಕೀಯ ಪ್ರಮಾಣಪತ್ರವನ್ನು ಪಡೆದ ನಂತರವೂ ಎರಡು ವರ್ಷಗಳಿಗೂ ಮೇಲ್ಪಟ್ಟು ಕೆಲಸ ನಿರ್ವಹಿಸಿರುತ್ತಾರೆ. ಈ ಕಾರಣದಿಂದ ಎದುರುದಾರರು ಮಾಡಿದ ಆದೇಶವು ಆಧಾರರಹಿತವೆಂದು ಹೇಳುವ ಯಾವುದೇ ಸಾಕ್ಷ್ಯಾಧಾರಗಳ ಲಭ್ಯತೆಯಿಲ್ಲದ ಕಾರಣ

* ರಿಟ್ ಅಪೀಲು ಸಂಖ್ಯೆ.: 200059/2016 (ಎಸ್–ಆರ್ಇಎಸ್), ದಿನಾಂಕ: 8ನೇ ಸೆಪ್ಟೆಂಬರ್, 2016.

**ಏಕಸದಸ್ಯ ಪೀಠದ ಆದೇಶವನ್ನು ಎತ್ತಿ ಹಿಡಿದ ಉಚ್ಚ ನ್ಯಾಯಾಲಯದ ದ್ವಿ ಸದಸ್ಯ ಪೀಠವು ಸದರಿ ರಿಟ್ ಮೇಲ್ಮನವಿಯನ್ನು ವಜಾಗೊಳಿಸಿದೆ.**

ಅಪೀಲುದಾರರ ಪರ : ಶ್ರೀ ಶಿವಕುಮಾರ್ ಕಲ್ಲೂರು – ವಕೀಲರು.
ಪ್ರತ್ಯಪೀಲುದಾರರ ಪರ : ಶ್ರೀ ಸೈಯದ್ ಹಬೀಬ್ – ಹೆಚ್ಚುವರಿ ಸರ್ಕಾರಿ ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ:**

ತನ್ನ ರಿಟ್ ಅರ್ಜಿ ಸಂ.201104/2015ನ್ನು (ಎಸ್–ಆರ್ಇಎಸ್) ವಜಾಗೊಳಿಸಿ, ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರು ದಿನಾಂಕ 03.12.2015 ರಂದು ನೀಡಿದ ಆದೇಶದಿಂದ ಭಾದಿತನಾದ ಅಪೀಲುದಾರ–ನಜೀರ್ ಅಹಮ್ಮದ್ ಈ ರಿಟ್ ಅಪೀಲನ್ನು ದಾಖಲು ಮಾಡಿದ್ದಾನೆ.

2. ಪ್ರಸ್ತುತ ಅಪೀಲಿಗೆ ಕಾರಣವಾಗಿರುವ ಸಂಕ್ಷಿಪ್ತ ಸಂಗತಿಗಳು ಈ ಕೆಳಗಿನಂತಿವೆ:–

ಅಪೀಲುದಾರ / ಅರ್ಜಿದಾರನು, ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ, ರಾಯಚೂರು ನ್ಯಾಯಾಲಯದಲ್ಲಿ **"ಶಿರಸ್ತೇದಾರ್"** (ಹಿರಿಯ ಲಿಪಿಕ ಗುಮಾಸ್ತ)ನಾಗಿ ಕಾರ್ಯನಿರ್ವಹಿಸುತ್ತಿದ್ದಾನೆ. ಅನಾರೋಗ್ಯ ಪೀಡಿತನಾಗಿರವುದರಿಂದ, ಅವನು ತನ್ನ ಕಾಯಿಲೆಗೆ ಸಂಬಂಧಪಟ್ಟಂತೆ ತನ್ನನ್ನು ಪರೀಕ್ಷಿಸುವಂತೆ ವೈದ್ಯಕೀಯ ಮಂಡಲಿಗೆ ಕಳುಹಿಸುವಂತೆ ದಿನಾಂಕ **25.07.2012** ರಂದು ಮನವಿ ಮಾಡಿಕೊಂಡಿದ್ದು, ಆತನು ಆರೋಗ್ಯದ ಕಾರಣಗಳ ಮೇಲೆ ಸ್ವಯಂನಿವೃತ್ತಿ ಕೋರಿದ್ದಾನೆ.

ಸದರಿ ಮನವಿಯನ್ನು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇವರು ಪ್ರಾರಂಭದಲ್ಲೇ ತಿರಸ್ಕರಿಸಿದ್ದಾರೆ. ತದನಂತರ, ಅಪೀಲುದಾರನು, ಉಚ್ಛ ನ್ಯಾಯಾಲಯದ ಮುಂದೆ ಆಡಳಿತ ಅಪೀಲು ಸಂ.2/2013ನ್ನು ದಾಖಲು ಮಾಡಿದ್ದಾನೆ ಮತ್ತು ಅದನ್ನು ಅನುಬಂಧ–ಜಿ ಯ ಅನುಸಾರ ದಿನಾಂಕ **18.09.2014**ರ ಆದೇಶದ ಮೂಲಕ ರಿಜಿಸ್ಟ್ರಾರ್ (ವಿಜಿಲೆನ್ಸ್) ರವರಿಂದ ಪುರಸ್ಕರಿಸಲಾಗಿದೆ ಮತ್ತು ಆ ವಿಷಯವನ್ನು ಯುಕ್ತ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸಲು ಅಪೀಲುದಾರನಿಗೆ ಅವಕಾಶ ನೀಡುವಂತೆ ಮಾನ್ಯ ಪ್ರಧಾನ ಜಿಲ್ಲಾ ನ್ಯಾಯಾಧೀಶರು ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇವರಿಗೆ ಪುನರ್ವಿಚಾರಣೆಗಾಗಿ ವಾಪಸ್ಸು ಕಳುಹಿಸಲಾಗಿದೆ ಮತ್ತು ಕಾನೂನಿನ ಅನುಸಾರವಾಗಿ ಸಮುಚಿತ ಆದೇಶಗಳನ್ನು ಹೊರಡಿಸುವಂತೆ ನಿರ್ದೇಶಿಸಿದೆ.

3. ದಿನಾಂಕ **20.09.2012ರ ಓಪಿಡಿ ಸಂ.162253/2012** ರಲ್ಲಿರುವಂತೆ ಹೊರ ರೋಗಿಯಾಗಿ ತಾನೆ ಸ್ವತಃ ಪರೀಕ್ಷೆಗೊಳಗಾಗಿ ಚಿಕಿತ್ಸೆ ಪಡೆದುಕೊಂಡ ತರುವಾಯ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇವರ ಮುಂದೆ ಮತ್ತೊಂದು ವೈದ್ಯಕೀಯ ಪ್ರಮಾಣ ಪತ್ರವನ್ನು ಅಪೀಲುದಾರನು ಸಲ್ಲಿಸಿದ್ದಾನೆ ಮತ್ತು ಸದರಿ ಅರ್ಜಿಯೊಂದಿಗೆ, ದಿನಾಂಕ 27.09.2012 ರಂದು ವೈದ್ಯಕೀಯ ಕಾರಣಗಳ ಮೇಲೆ, ಸ್ವಯಂ ನಿವೃತ್ತಿಗಾಗಿ ಅರ್ಜಿಯನ್ನು ಸಲ್ಲಿಸಿದ್ದಾನೆ.

4. ಮಾನ್ಯ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇವರು ಅದೇ ವೈದ್ಯಕೀಯ ಪ್ರಮಾಣ ಪತ್ರವನ್ನು ಮರು ಹಾಜರುಪಡಿಸಿದ್ದಾನೆನ್ನುವ ಕಾರಣವೂ ಸೇರಿದಂತೆ, ಈ ಮುಂದಿನ ಕಾರಣಗಳನ್ನು ನೀಡಿರುವ ಆದೇಶ ಸಂ.138/ಆಡಳಿತ/2014 ದಿನಾಂಕ **20.10.2014**ರ ಮೂಲಕ ಈ ಅರ್ಜಿಯನ್ನು ಮತ್ತೊಮ್ಮೆ ತಿರಸ್ಕರಿಸಿದ್ದಾರೆಃ

*"ದಿನಾಂಕ 27.09.2012 ರಂದು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿಗಾಗಿ ತನ್ನ ಅರ್ಜಿಯನ್ನು ಸಲ್ಲಿಸಿದ ತರುವಾಯವೂ*

*ಸಹ ಈ ದಿನದವರೆಗೆ ಕರ್ತವ್ಯದ ಮೇಲೆ, ಅಧಿಕಾರಿಯು ಎರಡು ವರ್ಷಗಳಿಗಿಂತ ಹೆಚ್ಚಾಗಿ ಶಿರಸ್ತೇದಾರನಾಗಿ, ಒಬ್ಬ ಜವಾಬ್ದಾರಿಯುತ ಆಡಳಿತಾಧಿಕಾರಿಯಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಿದ್ದಾನೆ. ಅಧಿಕಾರಿಯ ಸಂಬಂಧದಲ್ಲಿ ಇಡೀ ದಾಖಲೆಗಳನ್ನು ನಾನು ಪರಿಶೀಲಿಸಿದ್ದೇನೆ ಮತ್ತು ಆತನು, ಜವಾಬ್ದಾರಿ ಅಧಿಕಾರಿಯಾಗಿ ಈ ಅವಧಿಯ ಸಮಯದಲ್ಲಿ ವೈದ್ಯಕೀಯ ಕಾರಣಗಳ ಮೇಲೆ ರಜೆಯನ್ನು ಉಪಯೋಗಿಸಿಕೊಂಡಿಲ್ಲ. ಆದ್ದರಿಂದ, ವೈದ್ಯಕೀಯ ಮಂಡಳಿಯು ನೀಡಿರುವ ವೈದ್ಯಕೀಯ ಪ್ರಮಾಣ ಪತ್ರವು ಸಾಕ್ಷ್ಯದ ಮೌಲ್ಯವಾಗಿ ಯಾವುದೇ ಪಾವಿತ್ರ್ಯತೆಯನ್ನು ಉಳಿಸಿಕೊಂಡಿರುವುದಿಲ್ಲ. ವೈದ್ಯಕೀಯ ಪ್ರಮಾಣ ಪತ್ರವನ್ನು ಪರಿಶೀಲಿಸಿದ ಮೇಲೆ, ಅರ್ಜಿ ದಿನಾಂಕ 27.09.2012ನ್ನು ಸಲ್ಲಿಸುವುದಕ್ಕೆ ಮುಂಚೆ ಓಪಿಡಿ ಸಂ.162253/2012 ದಿನಾಂಕ 29.09.2012 ರಂತೆ ಅಧಿಕಾರಿಯು ತಾನೆ ಸ್ವತಃ ಪರೀಕ್ಷೆಗೊಳಗಾಗಿ ಇದನ್ನು ನೀಡಿದ್ದಾನೆಂಬುದು ಕಂಡು ಬರುತ್ತದೆ. ವೈದ್ಯಕೀಯ ಮಂಡಳಿಯು, ಈ ಮುಂದಿನಂತೆ ಹೇಳಿದೆ:*

> *‘‘ಆರ್‌ಐಎಂಎಸ್ ಆಸ್ಪತ್ರೆಯಲ್ಲಿ ಓಪಿಡಿ ಸಂ.162253/2012 ದಿನಾಂಕ 20.09.2012ರ ಅನುಸಾರ ಪ್ರಧಾನ ಹಿರಿಯ ವಿಭಾಗ ಸಿ.ಜೆ. ಮತ್ತು ಸಿ.ಜೆ.ಎಂ. ನ್ಯಾಯಾಲಯ, ರಾಯಚೂರಿನಲ್ಲಿ ಶಿರಸ್ತೇದಾರನಾದ, ಶ್ರೀ ನಜೀರ್ ಅಹಮ್ಮದ್ ಬಿನ್ ಶ್ರೀ ಪಕೀರ್ ಅಹಮ್ಮದ್‌ನನ್ನು ನಾನು/ನಾವು ಎಚ್ಚರಿಕೆಯಿಂದ ಪರೀಕ್ಷಿಸಿದ್ದೇವೆಯೆಂದು ಪ್ರಮಾಣೀಕರಿಸಲಾಗಿದೆ’’ ಅವನ ಸ್ವಂತ ಹೇಳಿಕೆಯಂತೆ ಅವನ ವಯಸ್ಸು 58 ವರ್ಷಗಳಾಗಿದ್ದು ಮತ್ತು ಸುಮಾರು 58 ವರ್ಷಗಳ ಮುಖ ಲಕ್ಷಣವಿದೆ.*

*ತೀವ್ರ ಶ್ವಾಸಕೋಶ ಕಾಯಿಲೆಯೊಂದಿಗೆ ಎಡಗಡೆ ಅಬ್‌ಸ್ಟ್ರಾಕ್‌ನೊಂದಿಗೆ ಫೆಬ್‌ತೋಡ್ರೋಕ್ಸ್‌ನ ಪರಿಣಾಮವಾಗಿ (1) ತದನಂತರ ಯಾವುದೇ ವಿಧದ ಸೇವೆಗಾಗಿ ಅಥವಾ (2) ಇಲಾಖೆಯಲ್ಲಿ ತದನಂತರದ ಸೇವೆಗಾಗಿ ಶ್ರೀ ನಜೀರ್ ಅಹಮ್ಮದ್ ಸಂಪೂರ್ಣವಾಗಿ ಮತ್ತು ಖಾಯಂ ಆಗಿ ಅಸಮರ್ಥನೆಂದು ನಾನು/ನಾವು ಪರಿಗಣಿಸಿದ್ದೇವೆ. ಅವನ ಅಸಮರ್ಥತೆಯು ಯಾವುದೇ ಅನಿಯಮಿತವಾದ ದುಶ್ಚಟಗಳಿಂದ ಉಂಟಾಗಿರಬಹುದಾಗಿದೆಯೆಂಬುದು ನನಗೆ/ ನಮಗೆ ಕಂಡುಬರುವುದಿಲ್ಲ.*

*ವೈದ್ಯಕೀಯ ಪ್ರಮಾಣ ಪತ್ರವನ್ನು, ಅಂಗೀಕರಿಸಬಹುದಾದಲ್ಲಿ ಅಧಿಕಾರಿಯು ತನ್ನ ಅರ್ಜಿಯ ದಿನಾಂಕದಿಂದ ಕೊನೆಯ ಪಕ್ಷ ವೈದ್ಯಕೀಯ ರಜೆ ಅಥವಾ ಇತರೇ ಯಾವುದೇ ವಿಧದ ರಜೆಯ ಮೇಲಿರತಕ್ಕದ್ದು, ಮತ್ತು ಅವನು, ಸದರಿ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡಿದ ತರುವಾಯ ಕೊನೆಯ ಎರಡೂ ವರ್ಷಗಳು ಶಿರಸ್ತೇದಾರನಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಿರಬಾರದು. ಅದು, ಯಾವುದೇ ದಿನಾಂಕವನ್ನು ಹೊಂದಿಲ್ಲ ಅಥವಾ ಅದು ನೈಜವಾಗಿರುವುದಿಲ್ಲವೆಂಬ ಕಾರಣದ ಮೇಲೆ ವೈದ್ಯಕೀಯ ಮಂಡಲಿಯು ನೀಡಿದ <u>ವೈದ್ಯಕೀಯ ಪ್ರಮಾಣ ಪತ್ರವನ್ನು ನಾನು ತಿರಸ್ಕರಿಸಿರುವುದಿಲ್ಲ. ಆದರೆ, ಅಧಿಕಾರಿಯು, ಸಾಮಾನ್ಯವಾಗಿ ಈ ದಿನದವರೆಗೆ ತನ್ನ ಕರ್ತವ್ಯವನ್ನು ನಿರ್ವಹಿಸಿದ್ದಾನೆಂಬ ಸಂಗತಿಯ ದೃಷ್ಟಿಯಲ್ಲಿ ಮತ್ತು ಸದರಿ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡಿದ ತರುವಾಯವು ಸಹ ವೈದ್ಯಕೀಯ ಕಾರಣಗಳ ಮೇಲೆ ರಜೆ ಪಡೆದಿರುವುದಿಲ್ಲವೆಂಬ ಕಾರಣದಿಂದಾಗಿ ಅಂಗೀಕರಿಸಲಾಗದು.</u> ಈ ಸಂದರ್ಭದ ಸನ್ನಿವೇಶದಲ್ಲಿ, ಅಧಿಕಾರಿಯು, ವೈದ್ಯಕೀಯ*

*ಕಾರಣಗಳ ಮೇಲೆ ನಿವೃತ್ತಿಯಾಗುವುದಕ್ಕೆ ಅನುಮತಿಸುವಂತೆ ಕಾರಣಗಳನ್ನು ನೀಡಿಲ್ಲವೆಂಬುದು ನನ್ನ ಪರಿಗಣಿತ ಅಭಿಪ್ರಾಯವಾಗಿದೆ ಮತ್ತು ಹಾಗಾಗಿ ಅವನ ಅರ್ಜಿಯು ತಿರಸ್ಕರಿಸುವುದಕ್ಕೆ ಹೊಣೆಯಾಗುತ್ತದೆ. ಅಧಿಕಾರಿಯು, ಜಿಲ್ಲಾ ನ್ಯಾಯಾಲಯ ಆದೇಶ ಸಂ.72/ಆಡಳಿತ/2014 ದಿನಾಂಕ 10.06.2014ರ ಅನುಸಾರ ವಯೋನಿವೃತ್ತಿ ವಯಸ್ಸಿನ ಆಧಾರದ ಮೇಲೆ ದಿನಾಂಕ 31.10.2014 ಸೇವೆಯಿಂದ ನಿವೃತ್ತಿಯಾಗುವುದಕ್ಕೆ ಈಗಾಗಲೇ ಅನುಮತಿಸಲಾಗಿದೆಯೆಂಬುದನ್ನು ಉಲ್ಲೇಖಿಸುವುದು ಸಹ ಅಗತ್ಯವಾಗಿದೆ. ಅದಕ್ಕನುಸಾರವಾಗಿ, ನಾನು ಈ ಮುಂದಿನಂತೆ ಆದೇಶ ಮಾಡಲು ಕ್ರಮಜರುಗಿಸಿದ್ದೇನೆ.*

***ಆಜ್ಞೆ***

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯದಲ್ಲಿ ಪ್ರಸ್ತುತ ಶಿರಸ್ತೇದಾರರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ನಜೀರ್ ಅಹಮ್ಮದ್ ಇವರು ದಿನಾಂಕ 27.09.2012 ರಂದು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಲಾಗಿದೆ.*

*ಅದಕ್ಕನುಸಾರವಾಗಿ ಅಧಿಕಾರಿಗೆ ಮಾಹಿತಿ ನೀಡುವುದು."*

5. ಇದರಿಂದ ಭಾದಿತನಾದ, ಅರ್ಜಿದಾರನು, ಡಬ್ಲ್ಯೂ.ಪಿ.ಸಂಖ್ಯೆ 201104/2015 ರಲ್ಲಿ ಸರ್ಷಿಯೋರರಿ ರಿಟ್ ಮೂಲಕ ಈ ನ್ಯಾಯಾಲಯಕ್ಕೆ ಬಂದಿದ್ದು, ಅದನ್ನು ಈ ಮುಂದಿನ ಕಾರಣಗಳನ್ನು ನೀಡಿ ಅಪೀಲು ದಿನಾಂಕ 03.12.2015ರ ಮೇರೆಗಿನ ಆದೇಶದ ಮೂಲಕ ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರಿಂದ ವಜಾಗೊಳಿಸಲಾಗಿದ್ದು, ಅದನ್ನು ಕೆಳಗಿನಂತೆ ಉದ್ಧರಿಸಲಾಗಿದೆ.

*"6. ಮಂಡಿಸಲಾಗಿರುವ ವಾದಿಗಳ ಬೆಳಕಿನಲ್ಲಿ, ಪ್ರಸ್ತುತ ಪ್ರಕರಣದಲ್ಲಿ ಯಾವ ದೃಷ್ಟಿಯನ್ನು ಇಟ್ಟುಕೊಂಡು ಸ್ವಯಂ ನಿವೃತ್ತಿಯನ್ನು ಕೋರಲಾಗಿದೆ, ವೈದ್ಯಕೀಯ ಕಾರಣಗಳ ಮೇಲೆ ಕೋರಲಾಗಿದೆಯೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದಲ್ಲಿ, ಅಗತ್ಯಪಡಿಸಿದ ಕನಿಷ್ಟ ಸೇವೆಯನ್ನು ಪೂರ್ಣಗೊಳಿಸಿದ ಮೇಲೆ ಉಪಬಂಧಿಸಲಾದಂತೆ ಶಾಸನಾತ್ಮಕ ಸ್ವಯಂ ನಿವೃತ್ತಿಯಾಗಿರುವುದಿಲ್ಲ. ವೈದ್ಯಕೀಯ ಕಾರಣಗಳ ಮೇಲೆ ಸ್ವಯಂ ನಿವೃತ್ತಿಯನ್ನು ಕೋರಿರುವಾಗ ಮತ್ತು ಅಂಥ ಕೋರಿಕೆಯನ್ನು, ಇತರೇ ಕೆಲವೊಂದು ಪ್ರಯೋಜನಗಳನ್ನು ಅಂಗೀಕರಿಸಿರುವಲ್ಲಿ, ಉದ್ಯೋಗಿಯು ಹಕ್ಕುಳ್ಳವನಾಗಿದ್ದು, ವೈದ್ಯಕೀಯ ಕಾರಣಗಳ ಮೇಲೆ ಸ್ವಯಂ ನಿವೃತ್ತಿಯ ಅಂಥ ಪರಿಗಣನೆಗೆ ಸಹ ಸಂಬಂಧಿಸಿರುತ್ತದೆ. ಆದ್ದರಿಂದ, ನೌಕರನು, ಈ ಸೇವೆಗಳನ್ನು ನಿರ್ವಹಿಸುವುದಕ್ಕೆ ವೈದ್ಯಕೀಯವಾಗಿ ಅನರ್ಹನಾಗಿರುವನೆಂಬ ಸಂಗತಿಯ ಈ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡಿರುವಾಗ ಈ ಅಂಶಗಳ ಪೈಕಿ ಅದೂ ಸಹ, ಪರಿಗಣನೆಗಾಗಿ ಸುಸುಂಬದ್ಧವಾಗಿದೆ.*

*7. ವೈದ್ಯಕೀಯ ಮಂಡಲಿಯು, ಅವನು ವೈದ್ಯಕೀಯವಾಗಿ ಅನರ್ಹನಾಗಿರುವುದಿಲ್ಲವೆಂದು ನಿರ್ಣಯಿಸಲಾದ ಸಂಗತಿಯು ಸತ್ಯವಾದುದಾಗಿರುತ್ತದೆ. ಈ ಅಭಿಪ್ರಾಯವನ್ನು ಪರಿಗಣನೆಗೆ ತೆಗೆದುಕೊಂಡಲ್ಲಿ ಮತ್ತು ಅರ್ಜಿಯನ್ನು ವಯೋ ನಿವೃತ್ತಿ ವಯಸ್ಸಿಗೆ ಮುಂಚೆಯೇ ಪುರಸ್ಕರಿಸಿದಲ್ಲಿ, ನಿಶ್ಚಿತವಾಗಿ, ಅದರಲ್ಲಿ ಒಂದು ಸಾರವಿರುತ್ತಿತ್ತು. ಮತ್ತೊಂದು ಕಡೆ, ನೇಮಕಾತಿ ಪ್ರಾಧಿಕಾರ ಸರಿಯಾಗಿಯೇ ಅಭಿಪ್ರಾಯಪಟ್ಟಿರುವಂತೆ ಅರ್ಜಿದಾರನು, ವೈದ್ಯಕೀಯವಾಗಿ ಅನರ್ಹನಾಗಿದ್ದಾನೆಯೆಂದು ವೈದ್ಯಕೀಯ ಅಭಿಪ್ರಾಯವಾಗಿದ್ದರೂ, ಅವನು, ವಯೋ ನಿವೃತ್ತಿ ವಯಸ್ಸನ್ನು ಹೊಂದುವ ದಿನಾಂಕದವರೆಗೆ ಅವನು*

*ಸೇವೆಯಲ್ಲಿ ಮುಂದುವರೆದಿರುವುದು ಮತ್ತು ವಯೋ ನಿವೃತ್ತಿ ವಯಸ್ಸನ್ನು ಹೊಂದಿದ ಮೇಲೆ ಸೇವೆಯಿಂದ ಅವನು ನಿವೃತ್ತಿಗೊಂಡಿರುವಾಗ ಆ ಹಂತದಲ್ಲಿ ಆ ಆಧಾರದ ಮೇಲೆ ಸ್ವಯಂ ನಿವೃತ್ತಿ ಪ್ರಯೋಜನ ನೀಡುವುದಕ್ಕೆ ವೈದ್ಯಕೀಯವಾಗಿ ಅನರ್ಹನಾಗಿರುವುವನೆಂಬುದನ್ನು ಪರಿಗಣಿಸುವ ಪ್ರಶ್ನೆ ಉದ್ಭವಿಸದು. ಅರ್ಜಿದಾರನು ಸಹಜ ರೀತಿಯಲ್ಲಿ ನಿವೃತ್ತಿಗೊಂಡಿದ್ದರಿಂದ ಈ ಅರ್ಜಿಯು, ಅನಾವಶ್ಯಕವಾಗಿದೆ.*

*8. ಆದ್ದರಿಂದ, ದಿನಾಂಕ 20.10.2014ರಲ್ಲಿನ ಪ್ರಶ್ನಿತ ಆದೇಶದಲ್ಲಿ ನಾನು ನೋಡಿದಂತೆ ಯಾವುದೇ ತಪ್ಪು ಎಸಗಿರುವುದಿಲ್ಲ ಹಾಗೂ ಅದು, ಯಾವುದೇ ಹಸ್ತಕ್ಷೇಪ ಬಯಸುವುದಿಲ್ಲ. ಈ ಅರ್ಜಿಯು, ಗುಣರಹಿತವಾಗಿದೆಯೆಂದು ಅಭಿಪ್ರಾಯಪಟ್ಟು, ಅದನ್ನು ವಿಲೇ ಮಾಡಲಾಗಿದೆ."*

6. ಇದರಿಂದ ಭಾದಿತನಾಗಿ, ಪ್ರಸ್ತುತ ಅಂತರ-ನ್ಯಾಯಾಲಯ ಅಪೀಲನ್ನು ನಮ್ಮ ಮುಂದೆ ದಾಖಲು ಮಾಡಿದ್ದಾನೆ.

7. ಅರ್ಜಿದಾರನು, ಮೂವರು ಸಕ್ಷಮ ವೈದ್ಯರು ದಿನಾಂಕ 29.09.2012ರ ಮೂಲಕ ನೀಡಿದ ವೈದ್ಯಕೀಯ ಮಂಡಲಿ ಪ್ರಮಾಣ ಪತ್ರದ ಪ್ರಕಾರ 'ಎಡಗಡೆ ಫಿಬ್ರೊಥೊರೆಕ್ಸ್ ಕ್ರೋನಿಕ್ ಅಬ್‌ಸ್ಟ್ರೀಕ್ಟಿವ್ ಲಂಗ್ ಡಿಸೀಸ್' ನಿಂದ ಎಂದರೆ, ಅದೇ ತ್ರೀವ ಶ್ವಾಸಕೋಶ ಕಾಯಿಲೆಯಿಂದ ಬಳಲುತ್ತಿದ್ದಾನೆ ಮತ್ತು ಅವನ ಅರ್ಜಿಯನ್ನು ಪರಿಗಣಿಸಲೇಬೇಕಾಗುತ್ತದೆ ಮತ್ತು ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪ ಆಧಾರದ ಮೇಲೆ ನೇಮಕಾತಿ), 1996 (ಸಂಕ್ಷಿಪ್ತವಾಗಿ 'ಕೆಸಿಎಸ್‌ಆರ್ ನಿಯಮಗಳು') 3-ಎ ನಿಯಮದ ನಿಬಂಧನೆಗಳಲ್ಲಿರುವಂತೆ ತಾನಾಗಿ 2012ನೇ ವರ್ಷದಲ್ಲಿ ಪುರಸ್ಕರಿಸಲಾಗಿದೆಯೆಂದು ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ವಾದಿಯಾದ ಶ್ರೀ ಶಿವಶಂಕರ್ ಕಲ್ಲೂರು ರವರು ವಾದ ಮಂಡಿಸಿದ್ದಾರೆ.

8. ಕೆಸಿಎಸ್ ನಿಯಮಗಳ 3ಎ ನಿಯಮವನ್ನು ಉಲ್ಲೇಖಕ್ಕಾಗಿ ಈ ಮುಂದೆ ಉದ್ಧೃತಗೊಳಿಸಿದೆ :

"3.ಎ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿಯಾದ ಸರ್ಕಾರಿ ನೌಕರನ ಅವಲಂಬಿತರ ನೇಮಕಾತಿ:– (1) ಈ ನಿಯಮಗಳ ಸಾಮಾನ್ಯನ್ವಯಕ್ಕೆ ಭಾಧಕವಾಗದಂತೆ, ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿಯಾದ ಸರ್ಕಾರಿ ನೌಕರನ ಅವಲಂಬಿತರು, ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಅರ್ಹನಾಗಿರತಕ್ಕದ್ದು.

(2) ಈ ನಿಯಮಗಳ ಅಡಿಯಲ್ಲಿ ಮೃತ ಸರ್ಕಾರಿ ನೌಕರನಿಗೆ ಅನ್ವಯಿಸಿದಂತೆ, 9ನೇ ನಿಯಮವನ್ನು ಹೊರತುಪಡಿಸಿ, ಅರ್ಹತೆಯ ಎಲ್ಲಾ ಷರತ್ತುಗಳು, ನೇಮಕಾತಿಯ ಷರತ್ತುಗಳು ಮತ್ತು ಅರ್ಜಿ ಹಾಗೂ ನೇಮಕಾತಿ ಪ್ರಕ್ರಿಯೆಯು, ವೈದ್ಯಕೀಯ ಕಾರಣಗಳ ಮೇಲೆ ತನ್ನ ನಿವೃತ್ತಿಯ ದಿನಾಂಕದಿಂದ ಜಾರಿಯಾಗಿ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿಯಾದ ಸರ್ಕಾರಿ ನೌಕರನ ಅವಲಂಬಿತರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

ಪರಂತು, ಕರ್ನಾಟಕ ಸಿವಿಲ್ ಸೇವೆಗಳು (ಅನುಕಂಪ ಕಾರಣಗಳ ಮೇಲೆ ನೇಮಕಾತಿ) (6ನೇ ತಿದ್ದುಪಡಿ) ನಿಯಮಗಳು, 2011ರ ಪ್ರಾರಂಭದ ದಿನಾಂಕದಿಂದ ವೈದ್ಯಕೀಯ ಕಾರಣಗಳ ಮೇಲೆ, ಸರ್ಕಾರಿ ನೌಕರನ ಎಲ್ಲಾ ಅವಲಂಬಿತರ ಅರ್ಹತೆಯು, ಸದರಿ ನಿಯಮಗಳ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗೆ ಅನ್ವಯಿಸುವುದು.

ವಿವರಣೆ:– ಈ ನಿಯಮಗಳ ಉದ್ದೇಶಕ್ಕಾಗಿ.

i) "ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿಯಾದ ಸರ್ಕಾರಿ ನೌಕರ ಎಂದರೆ, ಕರ್ನಾಟಕ ಸಿವಿಲ್ ಸೇವೆಗಳ

ನಿಯಮಗಳು, 1ನೇ ಜನವರಿ, 2010 ರಂದು ಅಥವಾ ತರುವಾಯದ ಪ್ರಕಾರ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ರಚಿಸಿರುವ ವೈದ್ಯಕೀಯ ಮಂಡಳಿಯ ಮೂಲಕ ಪ್ರಮಾಣಿಸಲಾದಂತೆ ಸಾರ್ವಜನಿಕ ಸೇವೆಗಾಗಿ ಕರ್ತವ್ಯದ ಮೇಲಿರುವಾಗ ಮತ್ತು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿಯಾದ ಖಾಯಂ ಆಗಿ ಅಸಮರ್ಥಗೊಂಡು ದೈಹಿಕ ಅಥವಾ ಮಾನಸಿಕ ದುರ್ಬಲತೆಯನ್ನು ಹೊಂದಿರುವ ಸರ್ಕಾರಿ ನೌಕರ.

ii) ''ಕರ್ತವ್ಯದ ಮೇಲಿರುವಾಗ'' ಎಂಬ ಪದಗಳು ಅವನು ವಾಸ ಮಾಡುವ ಸ್ಥಳದಿಂದ, ಕಾರ್ಯನಿರ್ವಹಿಸುವ ಸ್ಥಳಕ್ಕೆ ತೆರಳುವ ಅವನ ಪ್ರಯಾಣವು, ಒಳಗೊಂಡಿರುತ್ತದೆ.

iii) ''ಅವಲಂಬಿತರು'' ಮತ್ತು ''ಕುಟುಂಬದ ಸದಸ್ಯರು'' ಎಂಬ ಪದಗಳನ್ನು ಮೃತ ಸರ್ಕಾರಿ ನೌಕರನ ಸಂಬಂಧದಲ್ಲಿ ಪರಿಭಾಷಿಸಲಾಗಿದ್ದು, ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿಯಾದ ಸರ್ಕಾರಿ ನೌಕರನ ಅವಲಂಬಿತರಂತೆ ಅರ್ಥೈಸತಕ್ಕದ್ದು.

iv) ಈ ನಿಯಮಗಳಲ್ಲಿ, ಮೃತ ಸರ್ಕಾರಿ ನೌಕರನ ಸಂಬಂಧದಲ್ಲಿ ಸಂಭವಿಸಿದ ''ವಿಧವೆ'' ಅಥವಾ ''ವಿಧುರ'' ಎಂಬ ಪದಗಳು, ಅದನ್ನು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿಯಾದ ಸರ್ಕಾರಿ ನೌಕರನ ''ಪತಿ ಅಥವಾ ಪತ್ನಿ ಎಂದು ಅರ್ಥೈಸತಕ್ಕದ್ದು.''

9. ವೈದ್ಯಕೀಯ ಕಾರಣಗಳ ಮೇಲೆ ಸ್ವಯಂ ನಿವೃತ್ತಿಗಾಗಿ ದಿನಾಂಕ 25.07.2012 ರಂದು ದಾಖಲು ಮಾಡಿದ, ಅಂಥ ಅರ್ಜಿಯನ್ನು 2012ನೇ ವರ್ಷದಲ್ಲಿ

ಅಂಗೀಕರಿಸಿ, ಪರಿಗಣಿಸಿದ್ದಲ್ಲಿ, ಅಪೀಲುದಾರನ ಅವಲಂಬಿತರು, ಕೆಸಿಎಸ್ ನಿಯಮಗಳ 3–ಎ ನಿಯಮದ ನಿಬಂಧನೆಗಳಲ್ಲಿರುವಂತೆ ಅದೇ ಇಲಾಖೆಯಲ್ಲಿ ತನ್ನ ಸ್ಥಳದಲ್ಲಿ ಅನುಕಂಪ ನೇಮಕಾತಿಗೆ ಹಕ್ಕುಳ್ಳವರಾಗಿರುತ್ತಿದ್ದರು. ಆದರೆ, ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇವರಿಂದ ಆತನ ಅರ್ಜಿಯನ್ನು ತಿರಸ್ಕರಿಸಿದ ದೃಷ್ಟಿಯಿಂದ, ದಿನಾಂಕ **31.10.2014** ರಂದು ಅವನು ವಯೋನಿವೃತ್ತಿ ವಯಸ್ಸನ್ನು ಹೊಂದಿರುವವರೆಗೆ ಕಾರ್ಯನಿರ್ವಹಿಸುವಂತೆ ಮಾಡಲಾಯಿತು. ಅದಾಗಿ, ಅರ್ಜಿಯನ್ನು ನಿವೃತ್ತಿಗೆ ಕೆಲವು ದಿನಗಳ ಮುಂಚೆ ಆದೇಶ ದಿನಾಂಕ 20.10.2014ರ ಅನುಸಾರ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇವರಿಂದ ತಿರಸ್ಕರಿಸಲಾಗಿದೆ ಮತ್ತು ಹೀಗಾಗಿ ಅವನು ಮತ್ತು ಅವನ ಅವಲಂಬಿತರು, ಕೆಸಿಎಸ್ ನಿಯಮಗಳು 1996ರ 3–ಎ ನಿಯಮದ ಪ್ರಯೋಜನವನ್ನು ಪಡೆಯುವುದನ್ನು ಕಳೆದು ಕೊಂಡಿದ್ದಾರೆಂದು ನಿವೇದಿಸಿದ್ದಾರೆ. ಹಾಗಾಗಿ, ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರು ಹಾಗೂ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇವರು ಅವನ ಮೊಕದ್ದಮೆಯನ್ನು ತಿರಸ್ಕರಿಸಿ ತಪ್ಪು ಮಾಡಿದ್ದಾರೆ ಮತ್ತು ಪ್ರಸ್ತುತ ಅಪೀಲನ್ನು ಅಂಗೀಕರಿಸುವುದಕ್ಕೆ ತಕ್ಕದಾಗಿರುತ್ತದೆಂದು ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿ ತಮ್ಮ ವಾದವನ್ನು ಮಂಡಿಸಿದ್ದಾರೆ.

10. ಮತ್ತೊಂದು ಕಡೆ, ಎದುರುದಾರರ ಪರವಾಗಿ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು, ಪ್ರಶ್ನಿತ ಆದೇಶಗಳನ್ನು ಬೆಂಬಲಿಸಿದ್ದಾರೆ.

11. ಮಾನ್ಯ ಏಕಸದಸ್ಯ ಪೀಠ ನ್ಯಾಯಾಧೀಶರು ಹಾಗೂ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇವರಿಂದ ಮಾಡಿದ ದಾಖಲೆಗಳು ಮತ್ತು ಆದೇಶಗಳನ್ನು ನಾವು ಪರಿಶೀಲಿಸಿದ್ದೇವೆ.

12. ಪ್ರಶ್ನಿತ ಆದೇಶಗಳಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿರುವುದಿಲ್ಲ ಮತ್ತು ಪ್ರಸ್ತುತ ಅಂತರ–ನ್ಯಾಯಾಲಯ ಅಪೀಲನ್ನು, ಈ ಮುಂದಿನ ಕಾರಣಗಳಿಗಾಗಿ ವಜಾಗೊಳಿಸಲು ತಕ್ಕದ್ದಾಗಿದೆಯೆಂಬುದು ನಮಗೆ ಮನದಟ್ಟಾಗಿದೆ.

13. ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ತಮ್ಮ ಆದೇಶ ದಿನಾಂಕ **20.10.2014**ರಲ್ಲಿ, ಅಪೀಲುದಾರ/ಅರ್ಜಿದಾರನ ವೈದ್ಯಕೀಯ ಸ್ಥಿತಿಯು, ತುಂಬಾ ಗಂಭೀರವಾಗಿದ್ದಲ್ಲಿ, ಅವನು ಇಲಾಖೆಯಲ್ಲಿ ಮುಂದುವರೆಯುತ್ತಿರಲಿಲ್ಲ ಮತ್ತು ದಿನಾಂಕ 25.07.2012 ರಂದು ವೈದ್ಯಕೀಯ ಕಾರಣಗಳ ಮೇಲೆ ಸ್ವಯಂ ನಿವೃತ್ತಿ ಕೋರಿದ್ದು, ವಯೋ ನಿವೃತ್ತಿ ವಯಸ್ಸನ್ನು ಹೊಂದುವವರೆಗೆ ಅಂದರೆ ದಿನಾಂಕ 31.10.2014 ರವರೆಗೆ ತದನಂತರ ಎರಡು ವರ್ಷಗಳು ಅವನು ನಿರಂತರ ಸೇವೆ ಸಲ್ಲಿಸುತ್ತಿರಲಿಲ್ಲವೆಂದು ಸರಿಯಾಗಿಯೇ ಅಭಿಪ್ರಾಯಪಟ್ಟಿದೆ. ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇವರು ಸ್ವಯಂ ನಿವೃತ್ತಿಯನ್ನು ವೈದ್ಯಕೀಯ ಕಾರಣಗಳ ಮೇಲೆ ವಾಸ್ತವವಾಗಿ ಕೋರಿದಲ್ಲಿ ಈ ಎರಡು ವರ್ಷಗಳಲ್ಲಿ ಕನಿಷ್ಠ ಪಕ್ಷ ಕೆಲವು ದಿನಗಳು ಅಥವಾ ಸ್ವಲ್ಪ ಅವಧಿಯಾದರೂ ವಾಸ್ತವಿಕವಾಗಿ ಕೆಲಸದಿಂದ ಅಪೀಲುದಾರನು ವಿಮುಖವಾಗಬೇಕಿತ್ತು, ಆದರೆ, ತನ್ನ ಇಲಾಖೆಯಲ್ಲಿ ಅವನಿಗೆ ಅನುಮತಿಯವಾಗಿದ್ದ ವೈದ್ಯಕೀಯ ಕಾರಣಗಳು ಅಥವಾ ಇತರೇ ಯಾವುದೇ ರಜೆ ಮೇಲೆ ಆತ ತೆರಳಿರುವುದಿಲ್ಲ ಹಾಗಾಗಿ ಕೆಸಿಎಸ್ ನಿಯಮಗಳು, 1996ರ 3-ಎ ನಿಯಮದ ನಿಬಂಧನೆಗಳಲ್ಲಿರುವಂತೆ ವೈದ್ಯಕೀಯ ಕಾರಣಗಳ ಮೇಲೆ ಅವನನ್ನು ನಿವೃತ್ತಿಗೊಳಿಸಲಾಗದು ಎಂದು ಅಭಿಪ್ರಾಯಪಟ್ಟಿರುವುದು ಸೂಕ್ತವಾಗಿದೆ.

14. ನಂಬಲರ್ಹ ಸಾಕ್ಷ್ಯವನ್ನು ನಂಬಲಾಗದು ಮತ್ತು ಸಂಭವಿಸಿದ ಸಂಗತಿಗಳ ಆಧಾರದ ಮೇಲಿನ ನಿರ್ಣಯಗಳು ಹಾಗೂ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಮುಂದೆ ಉದ್ಭವಿಸಿದ್ದು, ಈ ನ್ಯಾಯಾಲಯದಿಂದ ಬುಡ ಮೇಲು ಮಾಡಲಾಗದು. ಅವು ಈ ನ್ಯಾಯಾಲಯದ ಮೇಲೆ ಬದ್ಧವಾದ ಸಂಗತಿಗಳನ್ನು ನಿರ್ಣಯದ ಸಂಗತಿಗಳಾಗಿರುತ್ತವೆ. ಅದರಲ್ಲಿ ಯಾವುದೇ ವ್ಯತಿರಿಕ್ತತೆ ಕಂಡು ಬರುವುದಿಲ್ಲ. ವೈದ್ಯಕೀಯ ಕಾರಣಗಳ ಮೇಲೆ ಸ್ವಯಂ ನಿವೃತ್ತಿ ಕೋರಿ ಆ ಅಪೀಲುದಾರನಿಂದ ಅರ್ಜಿಯನ್ನು ದಾಖಲು ಮಾಡಿದ್ದಿರಲಿ, ವೈದ್ಯಕೀಯ ಪ್ರಮಾಣ ಪತ್ರದ ನಮೂನೆಯಲ್ಲಿ ಸಾಕ್ಷ್ಯವಾಗಿರಲಿ, ಸೂಕ್ತ ಸಮಯದಲ್ಲಿ ಅದರ ಮೇಲ್ನೋಟದಲ್ಲಿ ವೇದವಾಕ್ಯದಂತಿದೆ. ಆದರೆ ಸಂಗತಿಗಳ ದೃಷ್ಟಿಯಿಂದ ಅಪೀಲುದಾರನು ಎದುರುದಾರ-ಇಲಾಖೆಯಲ್ಲಿ ಸೇವೆಯನ್ನು ಮುಂದುವರೆಸಿದ್ದು,

ಎಂದರೆ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ, ನ್ಯಾಯಾಲಯ, ರಾಯಚೂರು, ಇವರು, ಸಾಕ್ಷ್ಯದ ಮಹತ್ವವನ್ನು, ಹಗಲಿರುಳೂ ತರಬೇತಿ ಪಡೆದ ವ್ಯಕ್ತಿಗಳಿಂದ ಪರೀಕ್ಷಿಸಲಾಗಿದ್ದು, ವೈದ್ಯಕೀಯ ಪ್ರಮಾಣ ಪತ್ರದ ನಮೂನೆಯಲ್ಲಿರುವಂತೆ ಸಾಕ್ಷ್ಯದ ವಿರುದ್ಧ ಉದ್ದೇಶಪೂರ್ವಕವಾಗಿ ನಿಜ ಸಂಗತಿಗಳನ್ನು, ಅವನು ನೀಡಿದ್ದಾನೆಂಬುದನ್ನು ನಂಬಲಾಗದು. ಪ್ರಸ್ತುತ ಅಪೀಲುದಾರನನ್ನು 'ಎಡಗಡೆ ಫಿಬ್ರೊಥೊರೆಕ್ಸ್ ಕ್ರೋನಿಕ್ ಅಬ್‌ಸ್ಟ್ರೀಕ್ಟಿವ್ ಲಂಗ್ ಡಿಸೀಸ್ ನಮೂನೆಯಲ್ಲಿರುವಂತೆ ಅವನ ಕಾಯಿಲೆಗಾಗಿ ದಿನಾಂಕ **20.09.2012** ರಂದು ಒಂದೇ ದಿನದಂದು ಹೊರರೋಗಿಯಾಗಿ ಮಾತ್ರ ವೈದ್ಯರಿಂದ ಪರೀಕ್ಷಿಸಲಾಗಿದೆ ಮತ್ತು ಅವರಿಂದ ನೀಡಲಾದ ಪ್ರಮಾಣಪತ್ರದಲ್ಲಿ ಅವನು, ಯಾವುದೇ ವಿಧದಲ್ಲಿ ಮುಂದುವರೆದು ಸೇವೆ ಮಾಡಲು ಖಾಯಂ ಆಗಿ ಅಸಮರ್ಥಗೊಂಡಿದ್ದಾನೆನ್ನುವ ಸಂಗತಿಯು ಅಂಶಗಳು, ಅವನು ಅಂತಿಮವಾಗಿ ವಯೋ ನಿವೃತ್ತಿ ವಯಸ್ಸನ್ನು ತಲುಪುವವರೆಗೆ, ಎರಡು ವರ್ಷಗಳಿಗಿಂತ ಹೆಚ್ಚಾಗಿ ದಿನಾಂಕ 31.10.2014 ರಂದು ಅವನ ನಿವೃತ್ತಿಯವರೆಗೆ ಶಿರಸ್ತೇದಾರನಾಗಿ 'ಈ ನ್ಯಾಯಾಲಯದಲ್ಲಿ ಅವನು ವಾಸ್ತವಿಕವಾಗಿ ಕಾರ್ಯನಿರ್ವಹಿಸುವುದರ ಮೂಲಕ ವೈದ್ಯಕೀಯ ಪ್ರಮಾಣಪತ್ರದಲ್ಲಿನ ದೃಢೋಕ್ತಿಗಳನ್ನು ಹುಸಿ ಮಾಡಿದ್ದಾನೆ ಎಂಬುದು ಕಂಡುಬರುತ್ತದೆ.

15. ಸರ್ಕಾರಿ ನೌಕರನ ಅವಲಂಬಿತರಿಗೆ ಅನುಕಂಪ ಉದ್ಯೋಗ ನೀಡಲು ಕೆಸಿಎಸ್ ನಿಯಮಗಳ 3–ಎ ನಿಯಮದ ಅಡಿಯಲ್ಲಿನ ಪ್ರಯೋಜನವು, ಅವನು, ವೈದ್ಯಕೀಯ ಕಾರಣಗಳ ಮೇಲೆ, ವಾಸ್ತವಿಕವಾಗಿ ನಿವೃತ್ತಿಯಾದ್ದಲ್ಲಿ ಮಾತ್ರ ಲಭ್ಯವಾಗುತ್ತದೆ ಮತ್ತು ಇಂಥ ಭಾವಿತವಾಗಿ ತೆಗೆದುಕೊಂಡ ನಿವೃತ್ತಿಯ ಮೇಲೆ ಲಭ್ಯವಾಗುವುದಿಲ್ಲ. ವಾಸ್ತವ ಸಂಗತಿಯೆಂದರೆ, ದಿನಾಂಕ **20.09.2012** ರಂದು ವೈದ್ಯಕೀಯ ಮಂಡಲಿಯಿಂದ ಅವನ ಕಾಯಿಲೆಯ ವೈದ್ಯಕೀಯ ಪ್ರಮಾಣಪತ್ರವನ್ನು ನೀಡಿದ್ದರೂ, ಅಪೀಲುದಾರನು, ಎರಡು ವರ್ಷಗಳಿಗಿಂತ ಹೆಚ್ಚು ಅವಧಿಗಾಗಿ ಯಾವುದೇ ರಜೆ ಇಲ್ಲದೇ ವಾಸ್ತವಿಕವಾಗಿ ನೌಕರಿ ಮಾಡಿದ್ದಾನೆ. ಆದುದರಿಂದ, ಮೇಲೆ ಉದ್ಧರಿಸಲಾದ ಕೆಸಿಎಸ್ ನಿಯಮಗಳ 3–ಎ ನಿಯಮ, ವೈದ್ಯಕೀಯ ಕಾರಣಗಳ ಮೇಲೆ ಸ್ವಯಂ ನಿವೃತ್ತಿಗಾಗಿ ಅವನ ಅರ್ಜಿಯನ್ನು ಅನ್ವಯಿಸಲಾಗದು.

16. ಇತರೇ ಯಾವುದೇ ಸಾಕ್ಷ್ಯದ ಅಭಾವದಿಂದ, ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇವರಿಂದ ಮಾಡಿದ ಆದೇಶವು, ಯಾವುದೇ ತಳಹದಿ ಇಲ್ಲದೇ ಅಥವಾ ಯಾವುದೇ ಆಧಾರವಿಲ್ಲದೇ, ಅಪೀಲುದಾರನು ಕಾರ್ಯನಿರ್ವಹಿಸಿದ ವಾಸ್ತವಿಕ ಸಂಗತಿಯು, ಸದರಿ ವೈದ್ಯಕೀಯ ಪ್ರಮಾಣಪತ್ರವನ್ನು ತಾನಾಗೀ ಸುಳ್ಳಾಗಿಸಿದ ವೈದ್ಯಕೀಯ ಪ್ರಮಾಣಪತ್ರದಲ್ಲಿ ಮಾಡಿದ ನಮೂದುಗಳಿಗೆ ವಿರುದ್ಧವಾಗಿದೆ. ಸ್ವಯಂ ವಿಧಿತ ಗರಿಷ್ಠ ಆಧಾರದ ಮೇಲೆ ವೈದ್ಯಕೀಯ ಪ್ರಮಾಣಪತ್ರಕ್ಕೆ ವಿರುದ್ಧವಾದ ಸಂಗತಿಗಳ ಬಗ್ಗೆ, ನಾವು ಕಣ್ಣುಮುಚ್ಚಿ ಕೂರಲಾಗುವುದಿಲ್ಲ. ಆ ಸಂಗತಿಗಳ ಬಗ್ಗೆ ಅವರೇ ಮಾತನಾಡಿರುವಾಗ, ವೈದ್ಯಕೀಯ ಪ್ರಮಾಣಪತ್ರದ ನಮೂನೆಯಲ್ಲಿರುವ ಸಾಕ್ಷ್ಯವನ್ನು, ದಸ್ತಾವೇಜು ಸಾಕ್ಷ್ಯವಾಗಿದ್ದರೂ ಸಹ, ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇವರಿಂದ ಮಾಡಿದ ಪ್ರಶ್ನಿತ ಆದೇಶವನ್ನು, ಆ ಸಂಗತಿಗಳ ಸರಿಯಾದ ನಿರ್ಣಯವನ್ನು ವಾಪಸ್ಸು ಕಳಿಸಿದ ಆಧಾರದ ಮೇಲೆ, ಎದುರುದಾರರ ಇಲಾಖೆಯ ಮುಂದೆ ಪಡೆದುಕೊಂಡ ನಿಜಸಂಗತಿಗಳನ್ನು ರದ್ದುಗೊಳಿಸಲಾಗದು.

17. ಈ ಮೇಲೆ ಹೇಳಲಾದ ಕಾರಣಗಳಿಗಾಗಿ, ನಮ್ಮ ಮುಂದಿರುವ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ರಾಯಚೂರು ಇವರಿಂದ ಮಾಡಿದ ಆದೇಶವನ್ನು ಸ್ಥಿರೀಕರಿಸಿದ ಅಪೀಲಿನ ಅಡಿಯಲ್ಲಿ ಆದೇಶದಲ್ಲಿರುವಂತೆ ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರಿಂದ ಗೊತ್ತು ಮಾಡಿದ ಕಾರಣಗಳಲ್ಲಿ ಯಾವುದೇ ಒಂದು ತಪ್ಪನ್ನು ನಾವು ನಿರ್ಣಯಿಸಿರುವುದಿಲ್ಲ. ಹಾಗಾಗಿ, ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರು ಹಾಗೂ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸಷನ್ಸ್ ನ್ಯಾಯಾಧೀಶರು, ರಾಯಚೂರು ಇವರು, ಪ್ರಶ್ನಿತ ಆದೇಶಗಳನ್ನು ಮಾಡಿ ತಪ್ಪು ಮಾಡಿಲ್ಲವೆಂಬುದು ನಮ್ಮ ಸ್ವಷ್ಟ ಅಭಿಪ್ರಾಯವಾಗಿದೆ.

ಅದಕ್ಕನುಸಾರವಾಗಿ, ಪ್ರಸ್ತುತ ರಿಟ್ ಅಪೀಲು ಯಾವುದೇ ಗುಣಗಳನ್ನು ಹೊಂದಿಲ್ಲದಿರುವುದರಿಂದ ವಜಾಗೊಳಿಸಲಾಗಿದೆ.

ವೆಚ್ಚಗಳಿಗೆ ಸಂಬಂಧಿಸಿದಂತೆ ಆದೇಶಿಸಿಲ್ಲ.